ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಶುಕ್ರವಾರ, ದಿನಾಂಕ : 20 ನೇ ಮಾರ್ಚ್, 2020

ವಿದ್ಯುತ್ ಚಾಲಿತ ಬಸ್ಸುಗಳ ಬಗ್ಗೆ

ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

1397 (1655) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಇತ್ತೀಚೆಗೆ ಡೀಸೆಲ್ ವಾಹನದ ಚಾಲನಾ ವೆಚ್ಚ ಹೆಚ್ಚಾಗುತ್ತಿದ್ದು, ಇಂತಹ ವಾಹನಗಳಿಂದ ಪರಿಸರ ಮಾಲಿನ್ಯ ಉಂಟಾಗುತ್ತಿದ್ದು, ಇವೆರೆಡನ್ನೂ ನಿಯಂತ್ರಣಕ್ಕೆ ತರಲು ಸರ್ಕಾರ ಬದಲಿ ವ್ಯವಸ್ಥೆ ಕುರಿತು ಯೋಜನೆ ಮಾಡಿಕೊಂಡಿದೆಯೇ;

(ಆ) ಸರ್ಕಾರವು ಸದರಿ ಬಸ್ಸುಗಳನ್ನು ಬದಲಾಯಿಸಿ, ವಿದ್ಯುತ್ ಚಾಲನಾ ಬಸ್ಸುಗಳನ್ನು ಬಳಸಲು ಇಚ್ಛಿಸಿರುವುದು ನಿಜವೇ;

(ಇ) ವಿದ್ಯುತ್ ಚಾಲಿತ ಬಸ್ಸುಗಳನ್ನು ಯಾವ ಮೂಲದ ಮುಖಾಂತರ ಖರೀದಿ ಮಾಡಲಾಗುವುದು ಹಾಗೂ ಈ ವಿದ್ಯುತ್ ಚಾಲಿತ ಬಸ್ಸಿನ ಪ್ರತಿ ಯುನಿಟ್‌ನ ಬೆಲೆ ಎಷ್ಟು;

(ಈ) ವಿದ್ಯುತ್ ಚಾಲಿತ ಬಸ್ಸುಗಳಿಗೆ ಪ್ರತಿ ಕಿ.ಮೀಗೆ ಆಗುವ ನಿರ್ವಹಣಾ ವೆಚ್ಚವೆಷ್ಟು;

(ಉ) ಈ ತರಹದ ಎಷ್ಟು ವಾಹನಗಳನ್ನು ಯಾವಾಗ ಖರೀದಿಸಲು ಸರ್ಕಾರ ಯೋಚಿಸಿದೆ ?